REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 28 । ಸಂಚಿಕೆ : 30 । ನವೆಂಬರ್ 03, 2021 । ಬುಧವಾರ । ಪುಟಗಳು : 8 । ಬೆಲೆ : 2/-

# 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆ





**ಬೆಂಗಳೂರು:** 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯು ನವೆಂಬರ್ 14 ರಿಂದ 21ರವರೆಗೆ ಜರುಗಲಿರುವ ನಿಮಿತ್ತ ಪೂರ್ವಭಾವಿ ಸಿದ್ದತಾ ಸಭೆಯು ಸಹಕಾರ ಸಚಿವರಾದ ಮಾನ್ಯ ಶ್ರೀ ಎಸ್.ಟಿ. ಸೋಮಶೇಖರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯನ್ನುದ್ದೇಶಿಸಿ ಮಾನ್ಯ ಸಚಿವರು ಮಾತನಾಡಿ ಸಹಕಾರಿ ವಲಯ ಹಾಗೂ ಸಹಕಾರ ಇಲಾಖೆಯ ಅಸ್ತಿತ್ವವನ್ನು ಕಾಪಾಡಲು ಸಪ್ತಾಹ ಒಂದು ವೇದಿಕೆಯಾಗಬೇಕು. ಈ ನಿಟ್ಟಿನಲ್ಲಿ ಸಹಕಾರ ಸಪ್ತಾಹವನ್ನು ವ್ಯವಸ್ಥಿತ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಸಹಕಾರಿಗಳಿಗೆ ಹಾಗೂ ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಸಲಹೆ ನೀಡಿದರು. ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಬದ್ಧತೆ ಇರಬೇಕು. ಸಹಕಾರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಇಲಾಖೆಯ ಅಮೂಲಾಗ್ರ ಬೆಳವಣಿಗೆಗೆ ರಾಜ್ಯಮಟ್ಟದ ಸಹಕಾರ ಸಂಸ್ಥೆಗಳು ಸಲಹೆ ನೀಡುವಂತೆ ಸೂಚಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರು ಮಾತನಾಡಿ ಪ್ರಸ್ತುತ ಸಹಕಾರಿ ವಲಯವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೃಷಿ ಪತ್ತಿನ ಸಹಕಾರ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕ್‌ಗಳು ಬೆಳವಣಿಗೆ ಕಾಣಬೇಕಿದೆ. ಸಂಸ್ಥೆಗಳ ಬಲವರ್ಧನೆಗೆ ಚರ್ಚಿಸುವ ವೇದಿಕೆಯಾಗಿ ಸಪ್ತಾಹ ನಡೆಯಬೇಕೆಂದರು.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ.ಸಿ. ಸತೀಶ್ ರವರು ಮಾತನಾಡಿ ಕನಿಷ್ಠ 5 ವರ್ಷಗಳಿಗೊಮ್ಮೆ ಸಹಕಾರ ಕಾಯ್ದೆಗೆ ತಿದ್ದುಪಡಿ ಮಾಡಬೇಕು. ಉನ್ನತಮಟ್ಟದ ಸಹಕಾರ ಸಂಸ್ಥೆಗಳಿಗೆ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಬೇಕೆಂದು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಬಿ.ಸಿ. ಲೋಕಪ್ಪಗೌಡ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡ, ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಶಕುಂತಲಾ ಬೆಲ್ದಾಳೆ, ಸಹಕಾರ ಸುದ್ದಿ ಮಾಧ್ಯಮದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್ ರವರುಗಳು ಸಹಕಾರ ಸಪ್ತಾಹ ಆಚರಣೆಯ ಕುರಿತಂತೆ ಸಲಹೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲತ ಜಿ.ಟಿ. ದೇವೇಗೌಡ, ಕರ್ನಾಟಕ ಸಹಕಾರ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಜೆ.ಪಿ. ಪಾಟೀಲ, ಡಾ॥ ಬಿ.ಡಿ. ಭೂಕಾಂತ್, ಶ್ರೀ ಹೆಚ್.ಎನ್. ಅಶೋಕ, ಶ್ರೀ ಎ.ಸಿ. ನಾಗರಾಜ್, ಶ್ರೀ ಆರ್. ರಾಮಾರೆಡ್ಡಿ, ಶ್ರೀ ಜೆ.ಎಂ.ಶಿವಪ್ರಸಾದ್, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚನ್ನವೀರಪ್ಪ, ಹಾಸನ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸೋಮನಹಳ್ಳಿ ನಾಗರಾಜ್, ಬಮೂಲ್ ಅಧ್ಯಕ್ಷರಾದ ಶ್ರೀ ಎಂ.ಡಿ. ನರಸಿಂಹಮೂರ್ತಿ, ಬೆಂಗಳೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಿ. ಹನುಮಂತಯ್ಯ, ಧಾರವಾಡ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ ಬಾಪೂಗೌಡ ಪಾಟೀಲ, ಬಾಗಲಕೋಟ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ ಕಾಶೀನಾಥ್ ಹುಡೇದ್, ಧಾರವಾಡ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಶಂಕರ ಪಿ. ಮುಗದ, ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎಸ್.ಜಿಯಾವುಲ್ಲಾ, ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಎನ್. ದೇವರಾಜ್, ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಕೆ.ಎಸ್. ನವೀನ್, ಶ್ರೀ ವೈ.ಹೆಚ್. ಗೋಪಾಲಕೃಷ್ಣ, ಶ್ರೀ ಎ.ಸಿ. ದಿವಾಕರ್, ಶ್ರೀ ಆರ್. ಶ್ರೀಧರ್, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್. ಎನ್. ಅರುಣ್‌ಕುಮಾರ್, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿಭಾವಂತ ನಟ ಪುನೀತ್ ರಾಜ್‌ಕುಮಾರ್ ನಿಧನ 2
ವೀರಶೈವ ಸಹಕಾರಿ ಬ್ಯಾಂಕ್ : 46ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ 3
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7



## ಆತ್ಮೀಯ ಸಹಕಾರಿಗಳೇ...

### ಕೇಂದ್ರ-ರಾಜ್ಯ ಸರ್ಕಾರಗಳು ಅಗತ್ಯ ಅನುದಾನವನ್ನು, ಬೆಂಬಲವನ್ನು ನೀಡಿದಲ್ಲಿ 'ಸಹಕಾರದಿಂದ ಸಮೃದ್ಧಿ' ಖಂಡಿತ ಕಾರ್ಯಸಾಧ್ಯವಾಗಲಿದೆ

ಈ ಸಲದ ಸಹಕಾರ ಸಪ್ತಾಹದ ವಿಶೇಷವೆಂದರೆ, ಕೇಂದ್ರ ಸರ್ಕಾರದಲ್ಲಿ ಪ್ರಥಮ ಬಾರಿಗೆ ಸಹಕಾರ ಸಚಿವಾಲಯ ಕಾರ್ಯನಿರ್ವಹಿಸುತ್ತಿರುವುದು. ಶ್ರೀ ಅಮಿತ್ ಷಾ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಸ್ವತಃ ಸಹಕಾರಿ ಧುರೀಣರಾಗಿದ್ದು ರಾಜಕೀಯ ನಾಯಕರಾಗಿರುವ ಅವರು ಅಧಿಕಾರ ವಹಿಸಿಕೊಂಡ ನಂತರ, ಮೊದಲ ಬಾರಿಗೆ ರಾಷ್ಟ್ರೀಯ ಸಹಕಾರಿಗಳ ಸಮ್ಮೇಳನವನ್ನು ಆಯೋಜಿಸಿದ್ದರು.

ನಮ್ಮ ಸಹಕಾರ ಕ್ಷೇತ್ರದ ಸಮಸ್ಯೆಗಳನ್ನು ಅರಿತಿರುವ ಶ್ರೀ ಅಮಿತ್ ಷಾ ಅವರು ಸಮಗ್ರ ಬದಲಾವಣೆ ತರಬಯಸಿದ್ದಾರೆ. ಸಹಕಾರ ವಲಯದ ಸಮಸ್ಯೆಗಳನ್ನು ಬಗೆಹರಿಸುವ ಮಾತುಗಳನ್ನು ಅವರು ಆಡಿದ್ದಾರೆ ಹಾಗೂ 'ಸಹಕಾರದಿಂದ ಸಮೃದ್ಧಿ' ಎಂಬ ಘೋಷಣೆ ಮೊಳಗಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಈ ಕೆಲ ದಶಕಗಳಲ್ಲಿ ಸಾಕಷ್ಟು ಸಮೃಧಿ ಸಾಧಿಸಲಾಗಿದೆ, ಇನ್ನೂ ಸಾಧಿಸಬೇಕಿದೆ. ಇದಕ್ಕೆ ಸಾಕ್ಷಿಯಾಗಿ ಗ್ರಾಮೀಣ, ಪಟ್ಟಣ, ನಗರಗಳಲ್ಲಿ ಅನೇಕ ಸಹಕಾರ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂಧ್ರ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಉತ್ತಮ ಪ್ರಗತಿ ಸಾಧಿಸಲಾಗಿದೆ.

ಆದರೆ, ಇದೆ ಮಾತುಗಳನ್ನು ಉತ್ತರ ರಾಜ್ಯಗಳ ಬಗ್ಗೆ ಹೇಳಲಾಗುವುದಿಲ್ಲ. ಅಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿರುವಂತೆ ಸಹಕಾರ ಕ್ಷೇತ್ರದಲ್ಲೂ ಹಿಂದುಳಿದಿವೆ. ಅಲ್ಲಿ 'ಸಹಕಾರದಿಂದ ಸಮೃದ್ಧಿ' ಆಗಬೇಕಿದೆ ಎನ್ನುವುದರ ಹಿನ್ನೆಲೆಯಲ್ಲಿ ಕೇಂದ್ರ ಸಹಕಾರ ಸಚಿವರ ಮಾತುಗಳನ್ನು ಗಮನಿಸಬೇಕಿದೆ.

ಇದೇ 14ರಿಂದ ನಮ್ಮ ಸಹಕಾರಿಗಳ ಸಂಭ್ರಮದ ಸಪ್ತಾಹ ಶುರುವಾಗಲಿದೆ. ಇಂದಿನ ಗಣಕೀಕೃತ, ಸ್ಪರ್ಧಾತ್ಮಕ, ದಿನಗಳಲ್ಲಿ ಸಹಕಾರ ಬ್ಯಾಂಕಿಂಗ್ ಕ್ಷೇತ್ರ ಯಶಸ್ಸನ್ನು ಕಾಣಬೇಕಾದರೆ ಪರಿಣಾಮಕಾರಿಯಾದ ಸಹಭಾಗಿತ್ವ ಅಗತ್ಯವಿದೆ. ಜೊತೆಗೆ ಸಮಾನ ಮನಸ್ಕ ವಲಯಗಳೊಂದಿಗೆ ಸಹಭಾಗಿತ್ವವನ್ನು ಹೊಂದಿದಾಗ ಮಾತ್ರ ಗುರಿ ತಲುಪುವುದು ಸುಲಭವಾಗುತ್ತದೆ. ಆ ದಿಸೆಯಲ್ಲಿ ಈ ಬಾರಿಯ ಸಪ್ತಾಹದಲ್ಲಿ ನಾವು-ನೀವು ಸೇರಿ ಸಮಾಲೋಚಿಸೋಣ.

ಅಲ್ಲದೇ, ನಿತ್ಯ ಸಹಕಾರ ಚಿಂತನೆಯಲ್ಲಿ ತೊಡಗುವ ಹಿರಿಯರಾದ ನಮ್ಮಗಳಿಗೆ ಒಂದು ಕನಸಿದೆ. ರಾಜ್ಯದ ಪ್ರತಿ ಗ್ರಾಮದಲ್ಲಿಯೂ ಕನಿಷ್ಠ ಒಂದು ಸಹಕಾರಿ ಸಂಘವಾದರೂ ಸ್ಥಾಪನೆಯಾಗಬೇಕೆನ್ನುವುದು. ಈ ಕನಸು ನನಸಾಗಲು ನಮ್ಮ ಯುವ ಜನತೆ ಮುಂದಾಗಬೇಕಿದೆ. ನೇಕಾರರು, ಕಮ್ಮಾರರು, ಬಡಿಗರು ಇನ್ನಿತರ ಕುಶಲಕರ್ಮಿಗಳ, ಬಡವರ ಸಹಕಾರ ಸಂಘಗಳಿಗೆ ಬಲ ತುಂಬಬೇಕಿದೆ.

ಅದಕ್ಕಾಗಿ ಕೇಂದ್ರ-ರಾಜ್ಯ ಸರ್ಕಾರಗಳು ತಮ್ಮ ಮುಂದಿನ ಬಜೆಟ್‌ನಲ್ಲಿ ಈ ಕ್ಷೇತ್ರಕ್ಕೆ ಅಗತ್ಯ ಅನುದಾನವನ್ನು, ಬೆಂಬಲವನ್ನು ನೀಡಿದಲ್ಲಿ 'ಸಹಕಾರದಿಂದ ಸಮೃದ್ಧಿ' ಖಂಡಿತ ಕಾರ್ಯಸಾಧ್ಯವಾಗಲಿದೆ. ಇದೆಲ್ಲವೂ ಸಾಧ್ಯವಾಗುವುದೆಂಬ ಆಶಯದೊಂದಿಗೆ...

▶▶ ಎಚ್.ಕೆ. ಪಾಟೀಲ
ಅಧ್ಯಕ್ಷರು

## ಪ್ರತಿಭಾವಂತ ನಟ ಪುನೀತ್ ರಾಜ್‌ಕುಮಾರ್ ನಿಧನ



**ಬೆಂಗಳೂರು:** ಕನ್ನಡ ಚಿತ್ರರಂಗದ ಜನಪ್ರಿಯ ನಟರಾದ ಪುನೀತ್ ರಾಜ್‌ಕುಮಾರ್ ದಿನಾಂಕ: 29.10.2021 ರಂದು ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಈ ಪ್ರತಿಭಾವಂತ ನಟ ತನ್ನ 46ರ ಸಣ್ಣ ವಯಸ್ಸಿನಲ್ಲೇ ಮರಣಿಸಿರುವುದು ಆಘಾತ, ವಿಷಾದಕರ. ಅಗಲಿದ ನಟನಿಗೆ ಕನ್ನಡ ಚಿತ್ರರಂಗ ಮಾತ್ರವಲ್ಲದೆ, ಇಡೀ ಕರ್ನಾಟಕ ಕಂಬನಿ ಮಿಡಿದಿದೆ.

ಅವರು ನಟಿಸಿದ ಚಿತ್ರಗಳ ಸಂಖ್ಯೆ ದೊಡ್ಡದಲ್ಲ, ಅದರಿಂದ ಅವರು ಗಳಿಸಿಕೊಂಡ ಕನ್ನಡಿಗರ ಪ್ರೀತಿವಿಶ್ವಾಸ ದೊಡ್ಡದು. ಡಾ. ರಾಜ್‌ಕುಮಾರ್ ಅವರಲ್ಲಿ ಕನ್ನಡಿಗರು ಕಂಡಿದ್ದ ಕನ್ನಡದ ಮೇರು ವ್ಯಕ್ತಿತ್ವವನ್ನು ಪುನೀತ್ ಅವರಲ್ಲಿಯೂ ಕಾಣುತ್ತಿದ್ದು ಸಹಜವಾಗಿತ್ತು. ಅಪ್ಪು ಸಹ ಅಷ್ಟೇ ವಿನೀತ ಭಾವದಿಂದ ಅದನ್ನು ತಮ್ಮದಾಗಿಸಿಕೊಳ್ಳಲು ಯತ್ನಿಸುತ್ತಿದ್ದವರು.

ಕನ್ನಡಿಗರ ದನಿ ಎನಿಸಿದ್ದ ಡಾ. ರಾಜ್‌ಕುಮಾರ್ ಅವರು ತಮ್ಮ ಪಾತ್ರಗಳ ಮೂಲಕ ಹೇಗೆ ವರ್ಚಸ್ಸನ್ನು ಮೂಡಿಸುತ್ತಿದ್ದರೊ, ಅದೇ ರೀತಿಯಾದ ವರ್ಚಸ್ಸನ್ನು ಪುನೀತ್ ಕೂಡ ಮೂಡಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಜನಪ್ರಿಯವೆನಿಸದ ವಿಷಯಗಳನ್ನು ಇಟ್ಟುಕೊಂಡು ಕೆಲವು ಚಿತ್ರಗಳನ್ನು ಮಾಡಿದ್ದು, ಅವರ ಸಾಮಾಜಿಕ ಕಳಕಳಿಯ ದ್ಯೋತಕವೂ ಆಗಿತ್ತು. ಡಾ.ರಾಜ್ ಕುಮಾರ್ ಅವರಂತೆಯೇ ಪುನೀತ್ ಕೂಡ ತಮ್ಮ ಸಾವಿನ ನಂತರ ನೇತ್ರದಾನ ಮಾಡಿ ಅಪ್ಪನ ಆದರ್ಶ ಮೆರೆದಿದ್ದಾರೆ.

ಯುವ ನಟ ಪುನೀತ್ ರಾಜಕುಮಾರ್ ರವರ ಅಕಾಲಿಕ ಮರಣಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಹಕಾರಿ ಸಚಿವರಾದ ಎಸ್.ಟಿ ಸೋಮಶೇಖರ್, ಶಾಸಕರು ಹಾಗೂ ಮಹಾಮಂಡಳದ ಅಧ್ಯಕ್ಷರಾದ ಎಚ್.ಕೆ. ಪಾಟೀಲ್, ಉಪಾಧ್ಯಕ್ಷರಾದ ಬಿ.ಎಸ್. ಪರಮಶಿವಯ್ಯ ಹಾಗೂ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲಿಕ ಎಸ್. ಕೇರೂರೆ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

# ವೀರಶೈವ ಸಹಕಾರಿ ಬ್ಯಾಂಕ್ : 46ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ









**ಬೆಂಗಳೂರು:** ವೀರಶೈವ ಸಹಕಾರಿ ಬ್ಯಾಂಕಿನ 46ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 24–10–2021 ರಂದು ವರ್ಚುಯಲ್ ಮೀಟಿಂಗ್ ಮೂಲಕ ನಡೆಸಿದ್ದು, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಸ್.ಪರಮಶಿವಯ್ಯನವರು ಹಾಗೂ ಆಡಳಿತ ಮಂಡಲಿ ಸದಸ್ಯರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು. ಬ್ಯಾಂಕಿನ ಅಧ್ಯಕ್ಷರು ಸ್ವಾಗತ ಭಾಷಣ ಹಾಗೂ ಪ್ರಾಸ್ತಾವಿಕ ನುಡಿಯಲ್ಲಿ ಬ್ಯಾಂಕಿನ ಪ್ರಗತಿ, ಆರ್ಥಿಕ ಅಂಶಗಳು, ಮುಂದಿನ ವರ್ಷದಲ್ಲಿ ಕೈಗೊಳ್ಳುವ ಯೋಜನೆ, ಪ್ರಸಕ್ತ ಸಾಲಿನ ಲಾಭ ಗಳಿಕೆ ಕುರಿತು ಸವಿಸ್ತಾರವಾಗಿ ವಿವರಣೆಯನ್ನು ನೀಡಿದರು. ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯ ಮೇರೆಗೆ 2020–21ನೇ ಸಾಲಿಗೆ ಶೇ.10 ರಂತೆ ಲಾಭಾಂಶ ವಿತರಿಸುವುದಾಗಿ ತಿಳಿಸಿದರು.

ಬ್ಯಾಂಕಿನ ಸದಸ್ಯರ/ಗ್ರಾಹಕರ ಅನುಕೂಲಕ್ಕಾಗಿ ಆಡಳಿತ ಮಂಡಲಿಯು ಅತಿ ಕಡಿಮೆ ಬಡ್ಡಿದರದಲ್ಲಿ 'A' ಖಾತಾ ಹೊಂದಿರುವ ಸ್ಥಿರಾಸ್ತಿಯ ಮೇಲೆ ಗೃಹ ನಿರ್ಮಾಣ/ಗೃಹ ಖರೀದಿ/ನಿವೇಶನ ಖರೀದಿ ಸಾಲಗಳಿಗೆ RBI ನಿರ್ದೇಶನದಂತೆ ರೂ.70.00 ಲಕ್ಷಗಳವರೆಗೆ ಶೇ.7.50 ರಂತೆ ಬಡ್ಡಿದರವನ್ನು ದಿನಾಂಕ 1–11–2021 ರಿಂದ ಅನ್ವಯಿಸುವಂತೆ (ಷರತ್ತಿಗೊಳಪಟ್ಟು) ಪರಿಷ್ಕರಿಸಲಾಗಿರುವುದನ್ನು ಸಭೆಯಲ್ಲಿ ತಿಳಿಸಿದರು. ಈ ಮಹಾಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರು, ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶ್ರೀ ಭೈರವೇಶ್ವರ ಸಹಕಾರ ಬ್ಯಾಂಕ್ : 2020–21ನೇ ಸಾಲಿನ ಸರ್ವಸದಸ್ಯರ ಸಭೆ




**ತುಮಕೂರು:** ಶ್ರೀ ಭೈರವೇಶ್ವರ ಸಹಕಾರ ಬ್ಯಾಂಕ್ ನಿ., ತುಮಕೂರು ಇದರ 2020–21 ನೇ ಸಾಲಿನ ಸರ್ವಸದಸ್ಯರ ಸಭೆಯನ್ನು ದಿನಾಂಕ 23–10–2021 ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ ಆರ್ ವೆಂಕಟೇಶ್ ಬಾಬು ರವರು Zoom Virtual Meeting/Video conference ಮೂಲಕ ನಡೆಸಿಕೊಟ್ಟರು. ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಆರ್.ಕೃಷ್ಣಯ್ಯನವರು, ನಿರ್ದೇಶಕರುಗಳಾದ ಶ್ರೀ ಆನಂದಕುಮಾರ್ ರವರು, ಶ್ರೀ ಮಂಜುನಾಥ ಹೆಚ್ ಎಸ್, ಶ್ರೀ ಜಗದೀಶ್ ಎಸ್ ಆರ್, ಶ್ರೀ ಬೆಳ್ಳಿಲೋಕೇಶ್, ಶ್ರೀ ಬೋರೇಗೌಡ, ಡಾ. ಆನಂದಮೂರ್ತಿ ಜಿ ವಿ, ಶ್ರೀ ನಾಗರಾಜು ಜಿ, ಶ್ರೀ ಹನುಮಂತಯ್ಯ ಬಿ., ಶ್ರೀ ಶಾಮಣ್ಣ ಪಿ, ಶ್ರೀಮತಿ ಸಿ ರಾಧ ದೇವರಾಜ್,ಶ್ರೀಮತಿ ಹೆಚ್.ಜಿ. ಸುಜಾತ ನಂಜೇಗೌಡ, ಶ್ರೀ ಚಿಕ್ಕರಂಗಣ್ಣ ಟಿ.ಆರ್, ಶ್ರೀ ಕಾಂತರಾಜು ಕೆ.ಬಿ ರವರುಗಳು ಹಾಗೂ ವೃತ್ತಿಪರ ನಿರ್ದೇಶಕರುಗಳಾದ ಶ್ರೀ ಮುನಿಗಂಗಪ್ಪ ಕೆ.ಜಿ ಮತ್ತು ಶ್ರೀ ಸಿದ್ದರಾಜು ಬಿ ರವರುಗಳು ಹಾಗು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಡಿ.ಎ.ಕುಮಾರಸ್ವಾಮಿ ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು. ಈ ಸಂದರ್ಭದಲ್ಲಿ ಎ.ಟಿ.ಎಂ ಕಾರ್ಡನ್ನು ಬಿಡುಗಡೆ ಮಾಡಲಾಯಿತು. ಮಾನ್ಯ ಸದಸ್ಯರು / ಗ್ರಾಹಕರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದ ು ವಿನಂತಿಸುತ್ತಾ, ಸಭೆಯ ಕಾರ್ಯಕಲಾಪಗಳನ್ನು ಅಧ್ಯಕ್ಷರು ನಡೆಸಿಕೊಟ್ಟರು. ಶ್ರೀಮತಿ ಹೆಚ್.ಜಿ. ಸುಜಾತ ನಂಜೇಗೌಡ ಸ್ವಾಗತಿಸಿದರು. ಶ್ರೀಮತಿ ಸಿ.ರಾಧ ದೇವರಾಜ್ ನಿರೂಪಿಸಿದರು. ಮತ್ತು ಶ್ರೀ ಮುನಿಗಂಗಪ್ಪ ಕೆ.ಜಿ ರವರು ವಂದನಾರ್ಪನೆ ಮಾಡಿದರು.

# ಮುಂದಿನ 3 ವರ್ಷ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ ಶಕ್ತಿಕಾಂತ್ ದಾಸ್ ಮುಂದುವರಿಕೆ

**ನವದೆಹಲಿ:** ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರ ಅವಧಿಯನ್ನು ಸರ್ಕಾರ ಶುಕ್ರವಾರ ಮತ್ತೆ ಮೂರು ವರ್ಷಗಳವರೆಗೆ ವಿಸ್ತರಿಸಿದೆ. ಡಿಸೆಂಬರ್ 10 ರ ಬಳಿಕದ ಮೂರು ವರ್ಷಗಳ ಅವಧಿಗೆ ಅದೇ ಸ್ಥಾನಕ್ಕೆ ಮರು ನೇಮಕ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರನ್ನೊಳಗೊಂಡ ಕೇಂದ್ರ ಸಂಪುಟದ ನೇಮಕಾತಿ ಸಮಿತಿ ಮರು ನೇಮಕಾತಿ ನಿರ್ಧಾರಕ್ಕೆ ಅನುಮೋದನೆ ನೀಡಿದೆ.

ಈ ಬಗ್ಗೆ ಹೊರಡಿಸಲಾದ ಅಧಿಕೃತ ಹೇಳಿಕೆಯಲ್ಲಿ 'ಕ್ಯಾಬಿನೆಟ್ ನೇಮಕಾತಿ ಸಮಿತಿಯು ಡಿಸೆಂಬರ್ 10, 2021 ರ ನಂತರ ಮೂರು ವರ್ಷಗಳ ಅವಧಿಗೆ ಆರ್‌ಬಿಐ ಗವರ್ನರ್ ಆಗಿ ಶಕ್ತಿಕಾಂತ್ ದಾಸ್ ಅವರನ್ನು ಮರುನೇಮಕ ಮಾಡಲು ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲೋ ಅದನ್ನು ಅನುಮೋದಿಸಿದೆ ಎಂದು ತಿಳಿಸಲಾಗಿದೆ.

ಶಕ್ತಿಕಾಂತ್ ದಾಸ್ ಅವರು ಈ ಹಿಂದೆ ಹಣಕಾಸು ಸಚಿವಾಲಯದಲ್ಲಿ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿದ್ದರು. ಬಳಿಕ ಡಿಸೆಂಬರ್ 11, 2018 ರಂದು ಮೂರು ವರ್ಷಗಳ ಕಾಲ ರಿಸರ್ವ್ ಬ್ಯಾಂಕ್ ಮುಖ್ಯಸ್ಥರಾಗಿ ನೇಮಕಗೊಂಡಿದ್ದರು. ಹಣಕಾಸು, ತೆರಿಗೆ, ಉದ್ಯಮ, ಮೂಲಸೌಕರ್ಯಗಳಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಬಹುಮುಖ್ಯ ಹುದ್ದೆಗಳನ್ನು ನಿಭಾಯಿಸಿದ ಅನುಭವ ಹೊಂದಿದ್ದಾರೆ. ವಿಶ್ವ ಬ್ಯಾಂಕ್, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್, ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್, ಏಷ್ಯನ್ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್‌ಗಳಲ್ಲಿ ಭಾರತದ ಪರ್ಯಾಯ ಗವರ್ನರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಹಣಕಾಸು ಸಚಿವಾಲಯದಲ್ಲಿ ಸುದೀರ್ಘ ಅವಧಿಗೆ ಕಾರ್ಯನಿರ್ವಹಿಸಿರುವ ದಾಸ್ ಒಟ್ಟು 8 ಕೇಂದ್ರ ಬಜೆಟ್‌ಗಳ ತಯಾರಿಕೆಯಲ್ಲಿ ನೇರವಾಗಿ ಕಾರ್ಯನಿರ್ವಹಿಸಿದ್ದಾರೆ.



ಆರ್ಥಿಕ ವಿಭಾಗದಲ್ಲಿ ಅಪಾರ ಅನುಭವ ಹೊಂದಿರುವ ಶಕ್ತಿಕಾಂತ್ ದಾಸ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದು, ದೆಹಲಿ ವಿಶ್ವವಿದ್ಯಾಲಯದ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದಾರೆ.

ತಮಿಳುನಾಡು ಕೇಡರ್‌ನ 1980ನೇ ಬ್ಯಾಚ್ ಐಎಎಸ್ ನಿವೃತ್ತ ಅಧಿಕಾರಿಯಾಗಿರುವ ಶಕ್ತಿಕಾಂತ್ ದಾಸ್, ದಿಂಡಿಗಲ್ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. 2016 ರಿಂದ 2017ರ ವರೆಗೆ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಬಳಿಕ 15ನೇ ಹಣಕಾಸು ಆಯೋಗದ ಸದಸ್ಯರಾಗಿ ನೇಮಕಗೊಂಡರು.

ಪ್ರಸ್ತುತ ಆಡಳಿತಾವಧಿಯಲ್ಲಿ ವಿಸ್ತರಣೆ ಪಡೆದ ಮೊದಲ ಆರ್‌ಬಿಐ ಗವರ್ನರ್ ಎನಿಸಿಕೊಂಡಿದ್ದಾರೆ. ಈ ಹಿಂದಿನ ಗವರ್ನರ್‌ಗಳು ಕೆಲವರು ರಾಜೀನಾಮೆ ನೀಡಿದ್ದರೆ, ಇನ್ನು ಕೆಲವರು ಶಿಕ್ಷಣತಜ್ಞರಾಗಿ ಹಿಂತಿರುಗಲು ನಿರ್ಧರಿಸಿದ್ದರು.

## ಹಬ್ಬಗಳ ಅವಧಿಯಲ್ಲಿ ಆರ್ಥಿಕತೆಯ ಚೇತರಿಕೆ




**ಹೊಸದಿಲ್ಲಿ:** ಭಾರತದಲ್ಲಿ ಹಬ್ಬಗಳ ಋತುವಿನ ಆರಂಭದೊಂದಿಗೆ, ಆರ್ಥಿಕ ಚಟುವಟಿಕೆಗಳಿಗೂ ಗಣನೀಯ ಪುಷ್ಟಿ ಲಭಿಸಿದೆ. ಕೋವಿಡ್–19 ಬಿಕ್ಕಟ್ಟಿನ ನೆರಳಿನಿಂದ ಏಷ್ಯಾದ 3ನೇ ಅತಿ ದೊಡ್ಡ ಆರ್ಥಿಕತೆ ಕ್ರಮೇಣ ಹೊರಬರುತ್ತಿದೆ ಎಂದು ಬ್ಲೂಮ್‌ಬರ್ಗ್ ವರದಿ ತಿಳಿಸಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಗಣೇಶ ಚತುರ್ಥಿಯೊಂದಿಗೆ ಆರಂಭವಾಗಿರುವ ಹಬ್ಬಗಳ ಸೀಸನ್ ತಿಂಗಳಾನುಗಟ್ಟಲೆ ನಡೆಯುತ್ತದೆ. ಇದು ಭಾರತವನ್ನು ವಿಶ್ವದಲ್ಲೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯನ್ನಾಗಿಸುವ ನಿಟ್ಟಿನಲ್ಲಿ ಸಹಕರಿಸಿದೆ ಎಂದು ವರದಿ ತಿಳಿಸಿದೆ.

ಹಬ್ಬಗಳ ಸಂದರ್ಭ ಜನತೆ ನಾನಾ ವಿಧದಲ್ಲಿ ಖರ್ಚು ವೆಚ್ಚಗಳನ್ನು ಮಾಡುತ್ತಾರೆ. ಇದರ ಪರಿಣಾಮ ಸೇವಾ ವಲಯ ಮತ್ತು ಉತ್ಪಾದನಾ ಕ್ಷೇತ್ರ ಪ್ರಬಲವಾಗಿದೆ. ಸೆಪ್ಟೆಂಬರ್ ನಂತರ ರಫ್ತು ಚೇತರಿಸಿದೆ. ಕಾರ್ಖಾನೆಗಳಲ್ಲಿ ಉತ್ಪಾದನೆ ಆಗಸ್ಟ್‌ನಲ್ಲಿ ಶೇ.12 ಚೇತರಿಸಿದೆ ಎಂದು ವರದಿ ತಿಳಿಸಿದೆ. ಕೋವಿಡ್ ಬಿಕ್ಕಟ್ಟಿನ ಆಘಾತ, ಕಚ್ಚಾ ತೈಲ ಏರಿಕೆ, ಹಣದುಬ್ಬರದ ಸಂಕಷ್ಟಗಳು ಹಬ್ಬದ ಸೀಸನ್‌ನಲ್ಲಿ ದುಬಾರಿಯಾಗಿ ಪರಿಣಮಿಸಿದ್ದರೂ, ಹಬ್ಬದ ಸೀಸನ್‌ನಲ್ಲಿ ಆರ್ಥಿಕ ಚಟುವಟಿಕೆಗಳು ಚೇತರಿಸಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

# ಪ್ಯಾನ್ ಕಾರ್ಡ್ ಕಳೆದುಕೊಂಡಿದ್ದರೆ, ಪಡೆಯುವುದು ಹೇಗೆಂದು ತಿಳಿಯಿರಿ

ನೀವು ಪ್ಯಾನ್ ಕಾರ್ಡ್ ಅನ್ನು ಸೇಫ್ ಆಗಿ ಇಟ್ಟಿಕೊಂಡಿದ್ದಾರಾ?. ಏಕೆಂದರೆ, ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೂ ವ್ಯಕ್ತಿಯ ಫೋ–ಟೋ ಗುರುತಿನಂತೆಯೂ ಕಾರ್ಯನಿರ್ವಹಿಸುವ ಪ್ಯಾನ್ ಕಾರ್ಡ್ ಅನ್ನು ಕಳೆದುಕೊಂಡು ಕಷ್ಟವನ್ನು ಅನುಭವಿಸುವವರ ಪಾಡು ಹೇಳಬಾರದು. ನನ್ನ ಪ್ಯಾನ್ ಕಾರ್ಡ್ ಕಳೆದುಹೋಗಿದೆ. ನಾನು ಪ್ಯಾನ್ ಕಾರ್ಡ್ ನಂಬರ್ ಸಹ ನೆನಪಿನಲ್ಲಿ ಇಟ್ಟಿಕೊಂಡಿಲ್ಲ. ತುರ್ತಾಗಿ ಪ್ಯಾನ್ ಕಾರ್ಡ್ ನಂಬರ್ ತಿಳಿಯುವುದು ಹೇಗೆ ಎಂದು ನಮ್ಮಲ್ಲಿ ಕೇಳಿಕೊಳ್ಳುತ್ತಾರೆ. ಆ ಸಮಯದಲ್ಲಿ ಪ್ಯಾನ್ ಕಾರ್ಡ್ ಕಳೆದುಕೊಂಡ ಬಗ್ಗೆ ಅವರಿಗೆ ಪಶ್ಚಾತಾಪವಿರುತ್ತದೆ.

ಆದರೆ, ಚಿಂತಿಸಬೇಡಿ. ನಿಮ್ಮ ಪ್ಯಾನ್ ಕಾರ್ಡ್ ಕಳೆದುಹೋದರೆ ಮತ್ತೆ ವಾಪಸ್ ಪಡೆಯುವುದು ಹಾಗೂ ಪ್ಯಾನ್ ಕಾರ್ಡ್ ನಂಬರ್ ಅನ್ನು ನಿಮಿಷದಲ್ಲಿ ತೆಗೆದುಕೊಳ್ಳಬಹುದಾದ ಆಯ್ಕೆಯು ನಮಗೆ ಆನ್‌ಲೈನಿನಲ್ಲೇ ಲಭ್ಯವಿದೆ. ಹಾಗಾಗಿ, ಇಂದಿನ ಲೇಖನದಲ್ಲಿ ಪ್ಯಾನ್ ಕಾರ್ಡ್ ಕಳೆದುಕೊಂಡು ಪ್ಯಾನ್ ಕಾರ್ಡ್ ನಂಬರ್ ಸಹ ನೆನಪಿನಲ್ಲಿ ಇಲ್ಲ ಎಂದರೆ ಅದನ್ನು ಹೇಗೆ ತಿಳಿಯುವುದು ಹೇಗೆ? ಆನ್‌ಲೈನಿನಲ್ಲಿ ಇದಕ್ಕಾಗಿ ಇರುವ ಸುಲಭ ಮಾರ್ಗ ಯಾವುದು ಹಾಗೂ ಆನ್‌ಲೈನ್‌ನಲ್ಲಿ ನಕಲಿ ಪ್ಯಾನ್ ಕಾರ್ಡ್ಗಾಗಿ ಅರ್ಜಿ ಸಲ್ಲಿಸುವುದು ಹೇಗೆ ಎಂಬುದನ್ನು ಈ ಲೇಖನದಲ್ಲಿ ತಿಳಿಯಿರಿ.

ನಿಮ್ಮ ಪ್ಯಾನ್ ಕಾರ್ಡ್ ಸಂಖ್ಯೆ ತಿಳಿದುಕೊಳ್ಳಲು ಇನ್‌ಕಮ್ ಟ್ಯಾಕ್ಸ್ ಅಫಿಶಿಯಲ್ ವೆಬ್‌ಸೈಟ್ ತೆರೆಯಿರಿ. ತೆರೆಯಲು ಈ ಲಿಂಕ್ ಕ್ಲಿಕ್ ಮಾಡಿ. (https://incometaxindiaefiling.gov.in) ನಂತರ, ಇ–ಫೈಲಿಂಗ್ ವೆಬ್‌ಸೈಟ್‌ನಲ್ಲಿ, "ನಿಮ್ಮ ಪ್ಯಾನ್ ತಿಳಿಯಿರಿ" ಎಂಬ ಆಯ್ಕೆಯನ್ನು ಕ್ಲಿಕ್ ಮಾಡಿ. ನಿಮ್ಮ ಹುಟ್ಟಿದ ದಿನಾಂಕ ಮತ್ತು ನಿಮ್ಮ ಮೊದಲ ಹಾಗು ಕೊನೆಯ ಎರಡು ಹೆಸರುಗಳನ್ನು ತುಂಬಿರಿ. (ಪಾನ್‌ಕಾರ್ಡ್‌ನಲ್ಲಿ ನೀಡಿರುವಂತೆ) ನಂತರ ಇಮೇಜ್‌ನಲ್ಲಿರುವ ಕೋಡ್ ನಂಬರ್ ನಮೂದಿಸಿ, ಸಬ್‌ಮಿಟ್ ಕೊಡಿ. ನಿಮ್ಮ ಪ್ಯಾನ್ ಕಾರ್ಡ್ ಡೀಟೇಲ್ಸ್ ತೆರೆಯುತ್ತದೆ.

ಕಳೆದುಹೋದ ಪ್ಯಾನ್ ಕಾರ್ಡ್‌ಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು ಹೇಗೆ ಎಂಬುದನ್ನು ತಿಳಿಯುವುದಾದರೆ, ಕಳೆದುಹೋಗಿರುವ ನಿಮ್ಮ ಪ್ಯಾನ್




ಕಾರ್ಡ್ ಅನ್ನು ಪಡೆದುಕೊಳ್ಳಲು ಸಾಕಷ್ಟು ನಿಬಂಧನೆಗಳಿವೆ. ನೀವು ನಿಮ್ಮ ಮರುಮುದ್ರಣ ಪ್ಯಾನ್ ಕಾರ್ಡ್ ಪಡೆಯಲು ನೀವು ಅನುಸರಿಸಬೇಕಾದ ಕೆಲವು ಸರಳ ಹಂತಗಳು ಇಲ್ಲಿವೆ. ಇದಕ್ಕಾಗಿ, TIN-NS ಆರ್.ಬಿ.ಐನ ಅಧಿಕೃತ ವೆಬ್‌ಸೈಟ್‌ಗೆ ಲಾಗ್ ಇನ್ ಮಾಡಿ ಮತ್ತು PANಗಾಗಿ ಆನ್‌ಲೈನ್ ಅರ್ಜಿಯ ವಿಭಾಗಕ್ಕೆ ತೆರಳಿ. ಆ ಲಿಂಕ್ ಅನ್ನು ಕ್ಲಿಕ್ ಮಾಡಿದ ನಂತರ, ನಿಮ್ಮನ್ನು ಬೇರೆ ಪುಟಕ್ಕೆ ನಿರ್ದೇಶಿಸಲಾಗುತ್ತದೆ.

ಈಗ ಕಳೆದುಹೋದ ಪ್ಯಾನ್ ಕಾರ್ಡ್ ವಾಪಸ್ ಪಡೆಯಲು ಅಲ್ಲಿರುವ ಅರ್ಜಿ ನಮೂನೆಯನ್ನು ಭರ್ತಿ ಮಾಡಬೇಕಾಗುತ್ತದೆ, ಅವರ ಕಳೆದುಹೋದ ಪ್ಯಾನ್ ಸಂಖ್ಯೆ, ಹೆಸರು, ಸಂವಹನ ವಿಳಾಸ, ದೂರವಾಣಿ ಸಂಖ್ಯೆ, ಇಮೇಲ್ ಐಡಿ ಇತ್ಯಾದಿ ವಿವರಗಳನ್ನು ಒದಗಿಸಿ. ಪ್ಯಾನ್ ಕಾರ್ಡ್ ಅರ್ಜಿ ನಮೂನೆ, ಅರ್ಜಿದಾರರು ಸಲ್ಲಿಕೆಗೆ ಮೊದಲು ಸಹಿ ಹಾಕುವ ಮೂಲಕ ಕಳೆದುಹೋದ ಪ್ಯಾನ್ ಕಾರ್ಡ್ ಅರ್ಜಿ ನಮೂನೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು. ಇದಕ್ಕಾಗಿ ರೂ.107 (ದೇಶದೊಳಗಿದ್ದರೆ) ಅಥವಾ ರೂ.989 (ಸಂವಹನ ವಿಳಾಸ ಭಾರತದ ಹೊರಗಿದ್ದರೆ) ಪಾವತಿಸಬೇಕು.

## ಹಣಕಾಸು ಸೇವೆ, ಬ್ಯಾಂಕಿಂಗ್ ವಲಯದಲ್ಲಿ ಉದ್ಯೋಗ ಸೃಷ್ಟಿ

**ಹೊಸದಿಲ್ಲಿ:** ದೇಶದ ಹಣಕಾಸು ಸೇವೆ ವಲಯದಲ್ಲಿ ಗಣನೀಯವಾಗಿ ಉದ್ಯೋಗಗಳು ಸೃಷ್ಟಿಯಾಗಿವೆ. ಖಾಸಗಿ ಬ್ಯಾಂಕಿಂಗ್, ಇನ್ವೆಸ್ಟ್‌ಮೆಂಟ್, ಇನ್‌ಸ್ಟಿಟ್ಯೂಶನಲ್ ಈಕ್ವಿಟೀಸ್ ವಲಯದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ ಎಂದು ವರದಿಯಾಗಿದೆ. ಐಪಿಒಗಳ ಸರಣಿ, ವ್ಯಾಪಕ ಡಿಜಿಟಲೀಕರಣದ ಪರಿಣಾಮ ಹಣಕಾಸು ಸೇವೆ ಒದಗಿಸುವ ಕಂಪನಿಗಳಲ್ಲಿ ಉದ್ಯೋಗಾವಕಾಶಗಳು ಉಂಟಾಗುತ್ತಿವೆ. ನೌಕರಿ ಡಾಟ್‌ಕಾಮ್‌ನ ಪ್ರಕಾರ ಬ್ಯಾಂಕಿಂಗ್ ಮತ್ತು ಹಣಕಾಸು ವಲಯದಲ್ಲಿ ಕಳೆದ ಸಪ್ಟೆಂಬರ್‌ನಲ್ಲಿ ನೇಮಕಾತಿ ಚಟುವಟಿಕೆಗಳು ಶೇ.40 ವೃದ್ಧಿಸಿವೆ.

ಈ ವರ್ಷ ಸೆಪ್ಟೆಂಬರ್ ತನಕ 9 ತಿಂಗಳುಗಳಲ್ಲಿ ಹಣಕಾಸು ಸೇವೆ ವಲಯದ ಕಂಪನಿಗಳಲ್ಲಿ 300ಕ್ಕೂ ಹೆಚ್ಚು ಹಿರಿಯ ಅಧಿಕಾರಿಗಳ ನೇಮಕಾತಿ ನಡೆದಿದೆ ಎಂದು ನೇಟಿವ್ ಶೋಸ್ ಸಂಸ್ಥೆಯ ಸಮೀಕ್ಷೆ ತಿಳಿಸಿದೆ. ಹಣಕಾಸು ಸೇವೆ ವಲಯದ ಮೋತಿಲಾಲ್ ಓಸ್ವಾಲ್ 3,500ಕ್ಕೂ ಹೆಚ್ಚು ಮಂದಿಯನ್ನು ಕಳೆದ 6 ತಿಂಗಳಿನಲ್ಲಿ ನೇಮಿಸಿದೆ. ಪ್ರಸಕ್ತ ಸಾಲಿನ ಅಂತ್ಯಕ್ಕೆ ಮತ್ತೆ 2,000 ಮಂದಿಯನ್ನು ನೇಮಿಸಲಿದೆ. ಮತ್ತೊಂದು ಕಂಪನಿ ಐಐಎಫ್‌ಎಲ್ ಕಳೆದ ಏಪ್ರಿಲ್‌ನಿಂದ 8,000 ಮಂದಿಯನ್ನು ನೇಮಕ ಮಾಡಿಕೊಂಡಿದೆ.

# ಶ್ರೀ ಗಜಾನನ ಅರ್ಬನ್ ಕೋ-ಆಪರೇಟಿವ್ಹ ಬ್ಯಾಂಕ್ : 103ನೇ ವಾರ್ಷಿಕ ಸಾಮಾನ್ಯ ಸಭೆ





**ಬ್ಯಾಡಗಿ:** ಶ್ರೀ ಗಜಾನನ ಅರ್ಬನ್ ಕೋ-ಆಪರೇಟಿವ್ಹ ಬ್ಯಾಂಕಿನ 103ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ದಿನಾಂಕ:17.10.2021ರಂದು ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸುರೇಶ ಬ. ಪಾಟೀಲರವರ ಅಧ್ಯಕ್ಷತೆಯಲ್ಲಿ ಜರುಗಿತು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸುರೇಶ ಬ. ಪಾಟೀಲರವರು ಮಾತನಾಡಿ ವರದಿ ವರ್ಷದಲ್ಲಿ ಮಹಾಮಾರಿ ಕರೋನಾ (ಕೋವಿಡ್-19) ಎರಡನೇ ಅಲೆ ವಿಶ್ವವ್ಯಾಪಿ ಹರಡಿದ್ದು ದೇಶದ ಆರ್ಥಿಕತೆಯ ಮೇಲೆ ಸಾಕಷ್ಟು ವ್ಯತಿರಿಕ್ತ ಪರಿಣಾಮವಾಗಿದ್ದರೂ ಕೂಡಾ ನಮ್ಮ ಬ್ಯಾಂಕು ಹಿಂದಿನ ವರ್ಷಕ್ಕಿಂತ ಹೆಚ್ಚಿನ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತದೆ. ಇಂತಹ ಸಂಕಷ್ಟದ ಸಮಯದಲ್ಲಿಯೂ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಿಭೂತರಾದ ಮಾನ್ಯ ಸದಸ್ಯರುಗಳಿಗೂ, ಗ್ರಾಹಕರಿಗೂ, ಠೇವಣಿದಾರರಿಗೂ, ಹಿತೈಷಿಗಳಿಗೂ ಆಡಳಿತ ಮಂಡಳಿ ಪರವಾಗಿ ಹತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ದಿನಾಂಕ:31.03.2021ರ ಅಂತ್ಯಕ್ಕೆ 3392 ಸದಸ್ಯರನ್ನು ಹೊಂದಿ, ರೂ.1.40 ಕೋಟಿ ಷೇರು ಬಂಡವಾಳ ಹೊಂದಿದ್ದು, ರೂ.11.68ಕೋಟಿ ಆಪದ್ಧನ ಮತ್ತು ಇತರ ನಿಧಿಗಳು, ರೂ.71.30ಕೋಟಿ ಠೇವಣಿಗಳು, ರೂ.86.38 ಕೋಟಿ ದುಡಿಯುವ ಬಂಡವಾಳ, ರೂ.17.63 ಕೋಟಿ ಹೂಡಿಕೆಗಳು, ರೂ.61.77ಲಕ್ಷ ಸಾಲ ಮತ್ತು ಮುಂಗಡಗಳು, ಅನುತ್ಪಾದಕ ಆಸ್ತಿ ಶೇ.0.00 ಆಗಿದ್ದು, ರೂ.1.24 ಕೋಟಿ ನಿವ್ವಳ ಲಾಭವನ್ನು ಗಳಿಸಿರುತ್ತದೆ ಎಂದರು.

ಈ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಚನಬಸವನಗೌಡ ರಾ. ಪಾಟೀಲ, ನಿರ್ದೇಶಕರುಗಳಾದ ಶ್ರೀ ಸತೀಶ ವೀ. ಪಾಟೀಲ, ಶ್ರೀ ಸುರೇಶ ಜೆ. ಪಾಟೀಲ, ಶ್ರೀ ಅಂಬಾಲಾಲ ಟಿ. ಜೈನ್, ಶ್ರೀ ಶ್ರೀನಿವಾಸ ಯು. ಬೆಟಗೇರಿ, ಶ್ರೀ ನವೀನ ವ. ಪಾಟೀಲ, ಶ್ರೀ ಮನೋಹರ್ ಗು. ಅರ್ಕಾಚಾರಿ, ಶ್ರೀ ಬಿ.ಎಂ. ತುಮ್ಮರಿಕೊಪ್ಪದವರ, ಶ್ರೀ ಜಿ.ವಿ. ರಾಯ್ಕರ, ಶ್ರೀಮತಿ ಗಂಗಾಂಬಿಕಾ ಶಿ. ಪಾಟೀಲ, ಶ್ರೀಮತಿ ಸಾವಿತ್ರಾ ಗಿ. ಪಾಟೀಲ, ಶ್ರೀ ಡಿ.ಬಿ. ಹಣಸೀಮರದ, ವೃತ್ತಿಪರ ನಿರ್ದೇಶಕರುಗಳಾದ ಶ್ರೀ ಎಫ್.ಎಮ್. ಮುಳಗುಂದ, ಶ್ರೀ ಎಂ.ಕೆ. ವೀರನಗೌಡ್ರ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ.ಎಸ್. ಪ್ಯಾಟಿ ಉಪಸ್ಥಿತರಿದ್ದರು.

# ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್: ಯಶಸ್ವಿ ಸಾಲ ವಸೂಲಾತಿ ಹಾಗೂ ಉತ್ತಮ ಲಾಭ ಗಳಿಕೆ



**ಬೆಂಗಳೂರು:** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ 2020-21ನೇ ಸಾಲಿನ 23ನೇ ಸರ್ವಸದಸ್ಯರ ಮಹಾಸಭೆಯನ್ನು ವರ್ಚುವಲ್ ಮೀಟಿಂಗ್ ಮುಖಾಂತರ ನಡೆಸಲಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೋವಿಡ್ ಸಾಂಕ್ರಾಮಿಕದ ಪರಿಸ್ಥಿತಿಯಲ್ಲಿಯೂ ಸಹ ಬ್ಯಾಂಕು ಯಶಸ್ವಿ ಸಾಲ ವಸೂಲಾತಿಯಿಂದ ಬ್ಯಾಂಕು ರೂ.258.37 ಲಕ್ಷಗಳ ಲಾಭವನ್ನು ಗಳಿಸಿ, ತನ್ನ ಸದಸ್ಯರಿಗೆ ಶೇ.7.5ರಷ್ಟು ಷೇರು ಲಾಭಾಂಶವನ್ನು ವಿತರಿಸಲಾಗುವುದು ಎಂದು ಅಧ್ಯಕ್ಷರಾದ ಸದಾಶಿವರೆಡ್ಡಿಯವರು ತಿಳಿಸಿದರು.

ಮುಂದುವರೆದು ಆಧುನಿಕ ಮತ್ತು ಗುಣಮಟ್ಟದ ಬ್ಯಾಂಕಿಂಗ್ ಸೇವೆಯು ಎಲ್ಲಾ ವರ್ಗದ ಜನರಿಗೂ ಸುಲಭವಾಗಿ ಸಿಗುವಂತೆ ಅವಕಾಶ ಕಲ್ಪಿಸುವುದು ನಮ್ಮ ಗುರಿ ಎಂದು ಅವರು ತಿಳಿಸಿದರು. ಈ ಸರ್ವಸದಸ್ಯರ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವರೆಡ್ಡಿ, ಉಪಾಧ್ಯಕ್ಷರು ಹಾಗೂ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ 2020–21ನೇ ಹಣಕಾಸು ಸಾಲಿಗೆ ಸಂಬಂಧಿಸಿದಂತೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ಕೋವಿಡ್–19 ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ ಕೋವಿಡ್–19 ನಿಯಮಾವಳಿಗಳನ್ನು ಅನುಸರಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಘಗಳು 2020–21ನೇ ಸಾಲಿನ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ಭೌತಿಕ ಹಾಜರಾತಿಯೊಂದಿಗೆ ನಡೆಸಲು ಸೂಚಿಸಲಾಗಿದೆ. ಆ ರೀತಿ ಸಾಧ್ಯವಾಗದಿದ್ದ ಸಂದರ್ಭದಲ್ಲಿ ಅಂತಹ ಸಹಕಾರ ಸಂಸ್ಥೆಗಳು ವಿಡಿಯೋ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ ವಿಧಾನವನ್ನು ಅನುಸರಿಸಿ ನಡೆಸಲು ಅನುಮತಿಯನ್ನು ನೀಡಿರುತ್ತಾರೆ. ಈ ಮಧ್ಯೆ ಕೆಲ ಸದಸ್ಯರು 2020–21ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ವರ್ಚುಯಲ್ ವಿಧಾನದಲ್ಲಿ ನಡೆಸದೇ ಭೌತಿಕವಾಗಿಯೇ ನಡೆಸಲು ಆಗ್ರಹಿಸಿರುತ್ತಾರೆ. ಆದುದರಿಂದ ನಿರ್ದೇಶಕ ಮಂಡಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವ ವಿಚಾರದಲ್ಲಿ ದ್ವಂದ್ವ ಏರ್ಪಟ್ಟಿದ್ದು, ಗೊಂದಲವುಂಟಾಗಿರುತ್ತದೆ. ಆದುದರಿಂದ ಈ ವಿಚಾರದಲ್ಲಿ ಅಗತ್ಯ ಸಲಹೆ ನೀಡಲು ತಮ್ಮನ್ನು ಕೋರಲಾಗಿದೆ.**

**–ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

ಉತ್ತರ: ಸರ್ಕಾರದ ಆದೇಶ ಸಂಖ್ಯೆ: ಸಇ60 ಸಿಎಲ್‌ಎಮ್ 2021(ಇ) ಬೆಂಗಳೂರು, ದಿನಾಂಕ: 04.08.2021ರಲ್ಲಿ ತಿಳಿಸಿದಂತೆ ಸಹಕಾರ ಸಂಘಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು ಕೋವಿಡ್–19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ನಡೆಸಲು ಅವಕಾಶವಿದ್ದಲ್ಲಿ ಭೌತಿಕ ಹಾಜರಾತಿಯೊಂದಿಗೆ ನಡೆಸಬಹುದಾಗಿದೆ. ಬ್ಯಾಂಕಿನ ಎಲ್ಲಾ ಸಾಮಾನ್ಯ ಸದಸ್ಯರು (ಡಿಫಾಲ್ಟರ್‌ಗಳನ್ನು ಒಳಗೊಂಡಂತೆ) ಸಾಮಾನ್ಯ ಸಭೆಯಲ್ಲಿ ಭಾಗವಹಿಸಬಹುದಾಗಿದೆ. ಆದರೆ, ಕೇವಲ ಅರ್ಹ ಸದಸ್ಯರು ಮಾತ್ರ ಸಭೆಯ ಕೋರಂಗೆ ಮತ್ತು ಮತದಾನಕ್ಕಾಗಿ ಎಣಿಸಲ್ಪಡುತ್ತಾರೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸರಕಾರದ ಕೋವಿಡ್ ಸಂಬಂಧಿತ ನಿರ್ಬಂಧಗಳನ್ನು ಉಲ್ಲಂಘಿಸದೆ ಮಹಾಸಭೆ ನಡೆಸಲು ಸಾಧ್ಯವೇ ಎಂದು ಬ್ಯಾಂಕಿನ ಆಡಳಿತ ಮಂಡಳಿ ನಿರ್ಣಯ ಕೈಗೊಳ್ಳಬೇಕಿದೆ. ಬ್ಯಾಂಕಿನ ಒಟ್ಟು ಸಾಮಾನ್ಯ ಸದಸ್ಯರ ಸಂಖ್ಯೆ, ಹಿಂದಿನ ಮಹಾಸಭೆಗಳಲ್ಲಿ ಸದಸ್ಯರ ಸರಾಸರಿ ಹಾಜರಾತಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಸಭೆ ನಡೆಸಲು ಸಭಾಂಗಣದ ಲಭ್ಯತೆ ಮೊದಲಾದ ಸಂಗತಿಗಳನ್ನು ಪರಿಶೀಲಿಸಿ ಭೌತಿಕ ಹಾಜರಾತಿಯೊಂದಿಗೆ ಸಭೆ ನಡೆಸಲು ಸಾಧ್ಯವಾಗದಿದ್ದರೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಹಾಸಭೆ ನಡೆಸದೆ ಬೇರೆ ದಾರಿಯಿಲ್ಲ.

# ವಿಶ್ವಕರ್ಮ ಸಹಕಾರ ಬ್ಯಾಂಕಿನ ಸಹಯೋಗದೊಂದಿಗೆ ಲಸಿಕಾ ವಿತರಣಾ ಕಾರ್ಯಕ್ರಮ



**ಮಂಗಳೂರು:** ಭಾರತದಂತಹ ಜನಭರಿತ ದೇಶದಲ್ಲಿ ಕೋವಿಡ್ ಲಸಿಕೆ ವಿತರಣೆಯು ಅತ್ಯಂತ ಕಠಿಣ ಸಂಗತಿಯಾಗಿದೆ. ಇಂತಹುದರಲ್ಲಿ ದೇಶವು 100 ಕೋಟಿಗೂ ಮೇಲೆ ಜನರಿಗೆ ಲಸಿಕೆ ವಿತರಣೆ ಮಾಡಿರುವುದು ಅಪರೂಪದ ದಾಖಲೆಯಾಗಿದೆ. ಇದು ವಿಶ್ವದಲ್ಲಿಯೇ ವಿನೂತನ ಅತೀ ದೊಡ್ಡ ಕಾರ್ಯಕ್ರಮವಾಗಿದ್ದು, ದೇಶವಾಸಿಗಳಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ ಅವರು ಹೇಳಿದರು. ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಸಹಯೋಗದೊಂದಿಗೆ ಮಂಗಳೂರಿನ ರಥಬೀದಿಯಲ್ಲಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಜರುಗಿದ ಲಸಿಕಾ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಚಂದ್ರಪ್ರಭಾ, ದ.ಕ.ಜಿಲ್ಲಾ ಚಿನ್ನದ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಲ್. ಹರೀಶ್, ವಿಶ್ವಕರ್ಮ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಶಿವಪ್ರಸಾದ್, ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಜಯಕರ ಹಾಗೂ ಶ್ರೀ ಕೆ.ಕೆ. ವಿಠಲ ಆಚಾರ್ ಉಪಸ್ಥಿತರಿದ್ದರು. ವಿಶ್ವಕರ್ಮ ಸಹಕಾರ ಬ್ಯಾಂಕ್ ಇದರ ನೇತೃತ್ವದಲ್ಲಿ ನಡೆದ ಈ ಶಿಬಿರವು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನ, ಮಂಗಳೂರು, ದ.ಕ. ಜಿಲ್ಲಾ ಚಿನ್ನದ ಕೆಲಸಗಾರರ ಸಂಘ ರಿ., ಮಂಗಳೂರು ಮತ್ತು ವಿಶ್ವಕರ್ಮ ಯುವ ವೇದಿಕೆ ರಿ. ನ ಜಂಟಿ ಸಹಯೋಗದೊಂದಿಗೆ ಶ್ರೀ ಕಾಳಿಕಾಂಬ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಯಶಸ್ವಿಯಾಗಿ ಜರಗಿತು. ಸುಮಾರು 392 ಜನರು ಈ ಶಿಬಿರದ ಪ್ರಯೋಜನ ಪಡೆದರು.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ನಮ್ಮ ಮೆಟ್ರೋ ಮಾರ್ಗ ಇನ್ನಷ್ಟು ವಿಸ್ತಾರಗೊಳಿಸಲು ಮೂರನೇ ಹಂತದ ಯೋಜನೆಗೆ ಅಂತಿಮ ರೂಪ ನೀಡಲಾಗಿದ್ದೂ 42 ಕಿ.ಮೀ. ವಿಸ್ತೀರ್ಣದ ಈ ಯೋಜನೆ ಎರಡು ಕಾರಿಡಾರ್‌ಗಳನ್ನು ಒಳಗೊಂಡಿದ್ದು, ಒಟ್ಟು 31 ನಿಲ್ದಾಣಗಳು ಈ ಮಾರ್ಗದಲ್ಲಿ ತಲೆಯೆತ್ತಲಿವೆ.
- ವಾಹನದ ನೋಂದಣಿ ಪ್ರಮಾಣಪತ್ರದ ಜತೆಗೆ ನೋಂದಣಿ ಸಂಖ್ಯೆ ಹಂಚಿಕೆ, ತಾತ್ಕಾಲಿಕ ನೋಂದಣಿ, ವಾಹನಗಳ ವರ್ಗಾವಣೆ, ಆರ್.ಸಿ. ನಕಲು ಪ್ರತಿ, ಪ್ರಮಾಣ ಪತ್ರದಲ್ಲಿ ಬದಲಾವಣೆ, ಕಲಿಕೆ ಚಾಲನಾ ಪರವಾನಗಿ ವಿತರಣೆ, ಎಲ್.ಎಲ್.ನಲ್ಲಿ ಹೆಸರು / ವಿಳಾಸ ಬದಲಾವಣೆ, ಇನ್ನಿತರ ಪರವಾನಗಿ / ನವೀಕರಣ ಸೇರಿದಂತೆ ಆಯ್ದ 30 ಸೇವೆಗಳು ನ. 1ರಿಂದ ಆನ್‌ಲೈನ್‌ನಲ್ಲಿ ಲಭ್ಯವಾಗಲಿವೆ.
- ಈ ಸಲದ ದೀಪಾವಳಿಗೆ ಕೋಟ್ಯಂತರ ಉದ್ಯೋಗಿಗಳಿಗೆ 2020 – 21ರ ಸಾಲಿನಲ್ಲಿ ಭವಿಷ್ಯ ನಿಧಿ ಠೇವಣಿಗೆ ಶೇ. 8.5 ಬಡ್ಡಿ ನೀಡಲು ಹಣಕಾಸು ಸಚಿವಾಲಯವು ಅನುಮೋದಿಸಿರುವುದರಿಂದ 6 ಕೋಟಿಗೂ ಹೆಚ್ಚು ಉದ್ಯೋಗಿಗಳಿಗೆ ಅನುಕೂಲವಾಗಲಿದೆ.
- ಬಾಂಬೆ ಷೇರು ಮಾರುಕಟ್ಟೆ ಸಂವೇದಿ ಸೂಚ್ಯಂಕ 678 ಅಂಕ ಪತನಕ್ಕೀಡಾಗಿ, ಸೂಚ್ಯಂಕ 59,306ಕ್ಕೆ ದಿನದ ವಹಿವಾಟು ಮುಕ್ತಾಯಗೊಳಿಸಿತು. ನಂತರ, 185 ಅಂಕ ಕಳೆದುಕೊಂಡು 17,671ಕ್ಕೆ ಸ್ಥಿರವಾಯಿತು.
- ದೇಶದಲ್ಲಿ 8,400 ಜನೌಷದ ಮಳಿಗೆ ತೆರೆದಿದ್ದು, 1,451 ಬಗೆಯ ಔಷಧ ಲಭ್ಯವಿದೆ. ಕಳೆದ ವರ್ಷ 665 ಕೋಟಿ ರೂ. ವ್ಯವಹಾರ ಮಾಡಿದ್ದು, ಈ ವರ್ಷ 800 ಕೋಟಿ ರೂ. ಗುರಿ ಇಟ್ಟುಕೊಳ್ಳಲಾಗಿದೆ ಎಂದು ಇಂಧನ ಖಾತೆ ರಾಜ್ಯ ಸಚಿವರು ಹೇಳಿದ್ದಾರೆ.
- ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆ ಏರಿಕೆ ಮುಂದುವರಿದಿದ್ದು, ಬಳಕೆದಾರರು ಕಂಗಾಲಾಗಿದ್ದಾರೆ. ತೈಲ ದರ ಏರಿಕೆಯಿಂದ ಸಾಗಾಟ ವೆಚ್ಚವೂ ಹೆಚ್ಚಾಗಿದ್ದು, ಇದರ ಪರಿಣಾಮ ಅನಿವಾರ್ಯವಾಗಿ ಇತರೇ ಎಲ್ಲಾ ದಿನಬಳಕೆಯ ವಸ್ತುಗಳ ಬೆಲೆಯೂ ಆಕಾಶದತ್ತ ಮುಖ ಮಾಡಿದೆ.
- ನ್ಯೂಯಾರ್ಕ್ ಸ್ಟಾಕ್ ಎಕ್ಸ್ಚೇಂಜ್‌ನಲ್ಲಿ ಇದೇ ಮೊದಲ ಬಾರಿಕೆ ಬಿಟ್ಕಾಯಿನ್ ಇಟಿಎಫ್ ಚೊಚ್ಚಲ ಪ್ರವೇಶ ಮಾಡಿದ ಒಂದೇ ದಿನದಲ್ಲಿ ಮೌಲ್ಯ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿ, ಬಿಟ್ಕಾಯಿನ್ ಬೆಲೆ ಬರೋಬ್ಬರಿ ಡಾಲರ್ 65,000 ದಾಟಿದೆ.

## ಓ ದು ಗ ರ ಅ ನಿ ಸಿ ಕೆ . . .



**ಗ್ರಾಹಕರ ಮೇಲೆ ನಾನಾ ರೀತಿಯ ಶುಲ್ಕ:** ಎಸ್‌ಬಿಐ ಬ್ಯಾಂಕಿನಲ್ಲಿ ನಿರ್ವಹಿಸಲಾದ ಗ್ರಾಹಕ ಖಾತೆಯಲ್ಲಿ ಆರ್‌ಬಿಐ ಪರಿಶೀಲನೆ ನಡೆಸಿದಾಗ ಕೇಂದ್ರೀಯ ಬ್ಯಾಂಕ್ ಖಾತೆಯಲ್ಲಿನ ವಂಚನೆಯ ವರದಿ ವಿಳಂಬ ಮಾಡಿರುವುದು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆರ್‌ಬಿಐ ಒಂದು ಕೋಟಿ ರೂಪಾಯಿ ದಂಡ ವಿಧಿಸಿದೆ. ಈ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪಾವತಿ ಮಾಡಬೇಕಿದೆ. ಈ ದಂಡದಿಂದ ಗ್ರಾಹಕರ ಮೇಲೆ ಯಾವುದೇ ಹೊರೆ ಬೀಳುವುದಿಲ್ಲ ಎಂದಿದೆ. ಆದರೆ, ಎಸ್‌ಬಿಐ ಬ್ಯಾಂಕ್ ಗ್ರಾಹಕರ ಮೇಲೆ ನಾನಾ ರೀತಿಯ ಶುಲ್ಕ ವಿಧಿಸುವ ಮೂಲಕ ಇದನ್ನು ತುಂಬಿಕೊಳ್ಳುವುದು ಅಷ್ಟೆ. ▶▶ **ಚಂದ್ರಕಾಂತ್ ಎಂ., ತುಮಕೂರು**

**ಸರ್ಕಾರದ ನೀತಿ ವಿಫಲವೇ? :** ಕರ್ನಾಟಕವನ್ನು ಆಳಿದ ಚಕ್ರವರ್ತಿಗಳನ್ನು, ಮಹಾರಾಜರುಗಳನ್ನು, ವೀರರನ್ನು, ಧೀರರನ್ನು ನಾವು ಸ್ಮರಿಸಬೇಕಿದೆ. ಹಾಗೆಯೇ, ನಾಡಿನ ಹೆಮ್ಮೆಯ ವೀರ ಪುತ್ರರನ್ನು ನೆನಪಿಸಿಕೊಳ್ಳುವ ಕಳೆದ ವಾರದ ಸಂಪಾದಕೀಯ ತುಂಬ ಮೆಚ್ಚುಗೆಯಾಯಿತು. ಕರ್ನಾಟಕದ ಭವ್ಯತೆ ನೆನಪಿಸಿಕೊಂಡರೇ ಸಾಕು ಮೈ ರೋಮಾಂಚನಗೊಳ್ಳದೆ ಇರದು ನಿಜ. ▶▶ **ಪಿ. ಸುಜ್ಞಾನ ಮೂರ್ತಿ, ಹಾವೇರಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ಹವಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.